ಆದ ಹಾನಿಗೆ ಸರ್ಕಾರ ಇನ್ನೂ ಹೆಚ್ಚಿನ ಹಣ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು : ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆಯೇ?

ಶ್ರೀ ಸುರೇಶ್ ಕುಮಾರ್. ಎಸ್ (ರಾಜಾಜಿನಗರ) : ಮಾನ್ಯ ಉಪಾಧ್ಯಕ್ಷರೇ, ಮುಖ್ಯಮಂತ್ರಿಗಳು ನಂತರ ಉತ್ತರ ನೀಡುವುದಾಗಿ ಹೇಳಿದ್ದಾರೆ.

(5) ವಿಷಯ : ಕಾರವಾರದಲ್ಲಿ ಕೈಗಾ ಅಣು ಸ್ಥಾವರದ ವಿಕಿರಣದಿಂದ ಆಗಿರುವ ತೊಂದರೆ ಬಗ್ಗೆ.

ಶ್ರೀ ಸುನೀಲ್ ವಿ.ಹೆಗಡೆ (ಹಳಿಯಾಳ) : ಸನ್ಮಾನ್ಯ ಉಪಾಧ್ಯಕ್ಷರೆ, ನಮ್ಮ ಜಿಲ್ಲೆಯ ಕಾರವಾರ ಮತ ಕ್ಷೇತ್ರದಲ್ಲಿ ಕೈಗಾ ಅಣು ಸ್ಥಾವರ ಪ್ರಾರಂಭವಾಗಿ ಸುಮಾರು 15–20 ವರ್ಷಗಳಾಗಿದೆ. ಕೈಗಾದಲ್ಲಿ ಮೊದಲು ಸ್ಥಾವರ ನಿರ್ಮಾಣ ಮಾಡಬೇಕಾದರೆ ಒಂದು zone ಅಂತ ready ಮಾಡಿದರು. ಅಲ್ಲಿಂದ ಹೊರಗಡೆ 5 ಕಿ.ಮೀ. ಸುರಕ್ಷತಾ ವಲಯವೆಂದು ಮಾಡಿಕೊಂಡು, ಆ ಸುರಕ್ಷತಾ ವಲಯದಲ್ಲಿ ಬರುವಂಥ ಯಾವುದೇ ಗ್ರಾಮಗಳಲ್ಲಿ, ಯಾವುದೇ ರೀತಿಯ ಅಭಿವೃದ್ಧಿ ಮಾಡುವುದಕ್ಕೆ ಅನುಮತಿ ಕೊಡಬಾರದೆಂದು ಅಂದಿನ ಕೈಗಾ ಅಧಿಕಾರಿಗಳು ಬರೆದಿದ್ದರು. ಈ ಹಿಂದೆ 2–3 ಬಾರಿ ಜಿಲ್ಲಾ ಉಸ್ತುವಾರಿ ಸಚಿವರು, ಮಾಜಿ ಸಚಿವರ ಸಭೆಯಲ್ಲಿ ನಿರ್ಣಯವಾದಂತೆ ಅಲ್ಲಿ ವಾಸಿಸುವ ಜನರಿಗೆ ಸುರಕ್ಷತಾ ವಲಯದಿಂದ ಹೊರಗಡೆ ತೆಗೆದುಕೊಂಡು ಹೋಗಿ ಅಲ್ಲಿ ಅಭಿವೃದ್ಧಿ ಕಾರ್ಯ ಮಾಡಬೇಕು ಎಂದು ಆಗಿತ್ತು. ಈಗ ಏನಾಗಿದೆಯೆಂದರೆ, ಮೊನ್ನೆ ಕೈಗಾದಲ್ಲಿ ವಿಕಿರಣದಿಂದ ಒಂದು death ಆದ ಮೇಲೆ ಅಲ್ಲಿನ ಜನರಿಗೆ ಭಯ ಹುಟ್ಟಿದೆ. ಅಲ್ಲಿ ಗೋವುಗಳಿಗೆ ರೋಗ ಬರುತ್ತಿದೆ, ವಿಕಿರಣದಿಂದ ಮಕ್ಕಳಿಗೆ ರೋಗ ಬರುತ್ತಿದೆ, ಅಲ್ಲಿ ಬೆಳೆ ಬರುತ್ತಿಲ್ಲ. ಈ ಎಲ್ಲಾ ಕಾರಣಗಳಿಂದ 5 ಕಿ.ಮೀ. zone ನಲ್ಲಿ ಜನ ನಮ್ಮನ್ನು ಬೇರೆ ಕಡೆಗೆ shift ಮಾಡಿ ಎಂದು 10–12 ದಿವಸಗಳಿಂದ strike ಮಾಡುತ್ತಿದ್ದಾರೆ. ಆದರೆ, ಇವತ್ತಿನವರೆಗೆ ಸರ್ಕಾರದಿಂದ ಯಾವುದೇ ರೀತಿಯ ಆಶ್ವಾಸನೆ ಸಿಗುತ್ತಿಲ್ಲ. ಈಗ ಕೈಗಾದವರು ಅಲ್ಲಿ ಅಭಿವೃದ್ಧಿ ಮಾಡುವುದಕ್ಕೆ ರೂ.250.00 ಕೋಟಿಗಳನ್ನು ಹಾಕುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಅಲ್ಲಿನ ಜನ ಅಭಿವೃದ್ಧಿಪಡಿಸುವುದು ಬೇಡ ಎಂದು ಹೇಳುತ್ತಿದ್ದಾರೆ. ಕೈಗಾದಲ್ಲಿ ಕೆಲಸ

ಮಾಡುವ workers ಗಳು ಅಲ್ಲಿ ವಿಕಿರಣ ಆಗುತ್ತದೆಂದು, ಆ zone ಪ್ರದೇಶವನ್ನು ಬಿಟ್ಟು ಸುಮಾರು 20 ಕಿ.ಮೀ. ದೂರದಲ್ಲಿ ವಸತಿ ಮಾಡಿಕೊಂಡಿದ್ದಾರೆ. ಆದರೆ, ಈ ಜನರನ್ನು ಮಾತ್ರ ಅಲ್ಲೇ ಇಟ್ಟಿದಾರೆ. ದಯವಿಟ್ಟು ಆ zone ನಿಂದ ಹೊರಗಡೆ ತರಲಿಕ್ಕೆ ಸನ್ಮಾನ್ಯ ಮಂತ್ರಿಗಳು ಸರ್ಕಾರದ ಮೇಲೆ ಒತ್ತಾಯ ತಂದು ಜನರನ್ನು ಸ್ಥಳಾಂತರ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮತ್ತು ಇವತ್ತೇ ಈ ಸರ್ಕಾರದ ಭರವಸೆಯನ್ನು ಜಿಲ್ಲಾಧಿಕಾರಿಗಳ ಮುಖಾಂತರ ತಿಳಿಸಿ, ಆ strike ನ್ನು ಕೊನೆಗೊಳಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಕೈಗಾ ಅಣು ವಿದ್ಯುತ್ ಸ್ಥಾವರವು ಕೇಂದ್ರ ಸರ್ಕಾರ ಸ್ವಾಮ್ಯದ ಯೋಜನೆಯಾಗಿದೆ. ಇದು ಕೇವಲ ವಿದ್ಯುತ್ ಉತ್ಪಾದನೆಗೆ ಮಾತ್ರವಲ್ಲ. ಈ ದೇಶದ ರಕ್ಷಣೆಗೆ ಬೇಕಾದಂಥ ಬೇರೆ ಬೇರೆ ಉಪಕರಣಗಳು ತಯಾರಾಗ ಬೇಕೆಂಬ ಕಾರಣಕ್ಕಾಗಿ ಇಲ್ಲಿ ಈ ಸ್ಥಾವರವನ್ನು ಮಾಡಿದ್ದಾರೆ. ಅಲ್ಲಿನ ಆರೋಗ್ಯಾಧಿಕಾರಿಗಳು ಅಲ್ಲಿ ಈ ಕಾರಣಕ್ಕಾಗಿ ದುಷ್ಪರಿಣಾಮವಾಗಿಲ್ಲವೆಂಬ ವರದಿಯನ್ನು ಕಳುಹಿಸಿದ್ದಾರೆ. ಮಾನ್ಯ ಸುನೀಲ್ ವಿ. ಹೆಗಡೆಯವರು ಅಲ್ಲಿ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳುತ್ತಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಈಗಾಗಲೇ ಸರ್ಕಾರಕ್ಕೆ ಸ್ಪಷ್ಟ ಮಾಡಿದ್ದಾರೆ. ನಮ್ಮ ಸಂಸ್ಥೆಯಿಂದ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಯಾವುದೇ ತಕರಾರು ಇಲ್ಲವೆಂದು ಅಧಿಕೃತವಾದ ಮಾಹಿತಿಯನ್ನು ಅವರು ನಮಗೆ ಕಳುಹಿಸಿದ್ದಾರೆ. ನಾವು ಅವರಿಗೆ ತಿಳಿಸುತ್ತೇವೆ, ಅಲ್ಲಿ strike ನಡೆಯುತ್ತಿದೆಯೆಂಬ ವಿಚಾರವನ್ನು ಕೇಂದ್ರ ಸರ್ಕಾರದ ಗಮನಕ್ಕೂ ತರುತ್ತೇವೆ, ಮತ್ತೆ ಡಿ.ಸಿ.ಯವರ ಗಮನಕ್ಕೆ ತಂದು, ಇವರು ಮಾತುಕತೆಯ ಮೂಲಕ ಇದನ್ನು ಪರಿಹರಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

(6) ವಿಷಯ : ಹಾಸನದಲ್ಲಿ ಹೊಸ ಬಸ್‌ಸ್ಟ್ಯಾಂಡ್‌ನಿಂದಲೇ ಬಸ್ಸುಗಳು ಓಡಾಡುತ್ತಿರುವುದರಿಂದ ಆಗಿರುವ ತೊಂದರೆ ಬಗ್ಗೆ.

ಶ್ರೀ ಹೆಚ್.ಎಸ್.ಪ್ರಕಾಶ್ (ಹಾಸನ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಾರಿಗೆ ಸಚಿವರಿಗೆ ಈ ವಿಷಯವನ್ನು ಕೇಳಿದ್ದೆ, ಅದಕ್ಕೆ ಅವರು ಹೊಸ ಬಸ್